◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

KARNATAKA | ನೀಡ್ 24 ನ್ಯೂಸ್ · ಪ್ರತಿ ಸುದ್ದಿ, ಪ್ರತಿ ನಗರ | 21 November 2026

ಬಸವಣ್ಣನವರ ತತ್ವಗಳಿಗೆ ಅಪಮಾನ ಮಾಡುವ ಸಂವಿಧಾನ ವಿರೋಧಿ ಶಕ್ತಿಗಳನ್ನು ಖಂಡಿಸೋಣ - ಸಿಪಿಐ(ಎಂಎಲ್) ರೆಡ್ ಸ್ಟಾರ್ ಖಂಡನೆ - ನವೆಂಬರ್ 21ರಂದು ರಾಯಚೂರು ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆಗೆ ಕರೆ



ಬಸವಣ್ಣನವರ ತತ್ವಗಳಿಗೆ ಅಪಮಾನ ಮಾಡುವ ಸಂವಿಧಾನ ವಿರೋಧಿ ಶಕ್ತಿಗಳನ್ನು ಖಂಡಿಸೋಣ - ನಾಳೆ ರಾಯಚೂರಿನಲ್ಲಿ ಪ್ರತಿಭಟನೆಗೆ ಸಿಪಿಐ(ಎಂಎಲ್) ರೆಡ್ ಸ್ಟಾರ್ ಕರೆ

ರಾಯಚೂರು: ಕಲ್ಯಾಣ ಕ್ರಾಂತಿಯ ಮಹಾನ್ ರೂವಾರಿ, ಸಮಾನತೆ-ಸಾಮಾಜಿಕ ನ್ಯಾಯದ ಪ್ರತಿಪಾದಕ, ಕರ್ನಾಟಕದ ಸಾಂಸ್ಕೃತಿಕ ನಾಯಕ ಶ್ರೀಗುರು ಬಸವಣ್ಣನವರ ಹೆಸರಿಗೆ ಮಸಿ ಬಳಿಯುವ ಮತ್ತು ಅವರ ವಿಚಾರಧಾರೆಗೆ ಅಪಮಾನ ಮಾಡುವ ಸಂಘಪರಿವಾರದ ಕೋಮುವಾದಿ ಕಿಡಿಗೇಡಿಗಳ ಕೃತ್ಯವನ್ನು ಸಿಪಿಐ(ಎಂಎಲ್) ರೆಡ್ ಸ್ಟಾರ್ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಬಸವಣ್ಣನವರ ಸಮಾನತೆಯ ತತ್ವಗಳನ್ನು ಅವಮಾನಿಸುವ ಗುರುದ್ರೋಹಿ, ಸಮಾಜದ್ರೋಹಿ ಶಕ್ತಿಗಳನ್ನು ಕಾನೂನಿನ ಅಡಿಯಲ್ಲಿ ನಿಯಂತ್ರಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇವೆ.

ಈ ಅನ್ಯಾಯದ ವಿರುದ್ಧ ನವೆಂಬರ್ 21ರಂದು ರಾಯಚೂರಿನ ಶ್ರೀ ಬಸವೇಶ್ವರ ವೃತ್ತದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಸಕಲ ಶರಣ-ಶರಣೆಯರು, ಪ್ರಗತಿಪರರು ಹಾಗೂ ಸಮಾನತೆಯ ಆಶಯದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಎಂ. ಗಂಗಾಧರ್ ರಾಜ್ಯ ಕಾರ್ಯದರ್ಶಿ ಸಿಪಿಐ(ಎಂಎಲ್) ರೆಡ್ ಸ್ಟಾರ್, ಅವರು ಕರೆ ನೀಡಿದ್ದಾರೆ.

ಬಸವಣ್ಣನವರ ವಿಚಾರಧಾರೆಯೇ ನಮ್ಮ ಹೋರಾಟದ ದಾರಿ!

ಮತ್ತೆ ಕಲ್ಯಾಣ - ನಿತ್ಯ ಕಲ್ಯಾಣ - ಸತ್ಯ ಕಲ್ಯಾಣಕ್ಕಾಗಿ ಒಂದಾಗೋಣ ಎಂದರು!

— Ningappa

SIR ವಿರೋಧಿ ಮೂರನೇ ಹಂತದ ಹೋರಾಟಕ್ಕೆ ಸಿದ್ಧತೆ - ಒಕ್ಕೂಟದ ಕರೆ - ಬೆಂಗಳೂರಿನಲ್ಲಿ SIR ವಿರೋಧಿ ಜಾತ್ಯತೀತ ಪಕ್ಷಗಳು, ಜನಪರ ಸಂಘಟನೆಗಳ ಪತ್ರಿಕಾಗೋಷ್ಠಿ - ಚುನಾವಣಾ ಆಯೋಗದ ನಿಲುವು ಖಂಡನೆ, ರಾಜ್ಯ ಸರ್ಕಾರ ಸ್ಪಷ್ಟ ನಿಲುವು ತಳೆಯಲು ಆಗ್ರಹ

SIR ವಿರೋಧಿ ಮೂರನೇ ಹಂತದ ಹೋರಾಟಕ್ಕೆ ಸಿದ್ಧತೆ - ಒಕ್ಕೂಟದ ಕರೆ ಬೆಂಗಳೂರು: ನಗರದ ಕನಿಷ್ಕಾ ಹೋಟೆಲ್‌ನಲ್ಲಿ SIR ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ಕರ್ನಾಟಕ ವತಿಯಿಂದ ಪತ್ರಿಕಾಗೋಷ್ಠಿ ನಡೆಯಿತು. SIR ಪ್ರಕ್ರಿಯೆಯಲ್ಲಿ ಕೇಂದ್ರ ಚುನಾವಣಾ ಆಯೋಗದ ನಿಲುವುಗಳನ್ನು ಖಂಡಿಸಿದ ಮುಖಂಡರು, ತನ್ನ ನೈತಿಕ ಸೋಲನ್ನು ಮರೆಮಾಚಲು SSR ಪ್ರಕ್ರಿಯೆಯನ್ನ

— Ningappa

ನಮ್ಮ ಬಸವಣ್ಣನವರ ಗೌರವಕ್ಕೆ ಧಕ್ಕೆಯಾದರೆ ಸರ್ಕಾರ ಸುಮ್ಮನಿರಲ್ಲ - ಬಸವಣ್ಣನವರ ಭಾವಚಿತ್ರಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುಷ್ಪಾರ್ಚನೆ - ಬಸವ ಮಂಟಪ ಲೇಖಕ ರವಿ ಹಂಜ್ ವಿರುದ್ಧ ಎಫ್‌ಐಆರ್

ನಮ್ಮ ಬಸವಣ್ಣನವರ ಗೌರವಕ್ಕೆ ಧಕ್ಕೆಯಾದರೆ ಸರ್ಕಾರ ಸುಮ್ಮನಿರಲ್ಲ - ಬಸವಣ್ಣನವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುಷ್ಪಾರ್ಚನೆ ಬೆಂಗಳೂರು: ಕರ್ನಾಟಕದ ಸಾಂಸ್ಕೃತಿಕ ನಾಯಕ, ಕ್ರಾಂತಿಕಾರಿ ಮಾರ್ಗದ ಹರಿಕಾರ ಜಗಜ್ಯೋತಿ ಬಸವಣ್ಣನವರು ನಮ್ಮೆಲ್ಲರ ಅಸ್ಮಿತೆ. 12ನೇ ಶತಮಾನದಲ್ಲಿಯೇ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸಕ್ಕೆ ಹೊಸ ದಿಕ

— Ningappa

ಕೊಪ್ಪಳ ಶ್ರೀ ಗವಿಮಠಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭೇಟಿ - ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ದರ್ಶನ, ಆಶೀರ್ವಾದ ಸ್ವೀಕಾರ - ಜನವರಿ 24 ಜಾತ್ರಾ ಮಹೋತ್ಸವಕ್ಕೆ ಆಹ್ವಾನ



ಕೊಪ್ಪಳ ಶ್ರೀ ಗವಿಮಠಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭೇಟಿ - ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ದರ್ಶನ, ಆಶೀರ್ವಾದ ಸ್ವೀಕಾರ

ಕೊಪ್ಪಳ: ಕೊಪ್ಪಳ ಜಿಲ್ಲಾ ವ್ಯಾಪ್ತಿಯ ಶಾಲಾ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಿಮಿತ್ತ ಕೊಪ್ಪಳಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ, ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಹಾಗೂ ಅನ್ನದಾನ ಕ್ಷೇತ್ರವಾದ ಶ್ರೀ ಗವಿಮಠಕ್ಕೆ ಭೇಟಿ ನೀಡಿ, ಪೂಜ್ಯ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರ ದರ್ಶನ ಪಡೆದು ಆಶೀರ್ವಾದ ಹಾಗೂ ಗೌರವವನ್ನು ಸ್ವೀಕರಿಸಲಾಯಿತು ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಈ ಪವಿತ್ರ ಭೇಟಿಯ ವೇಳೆ ಪೂಜ್ಯ ಶ್ರೀಗಳು ಗ್ರಾಮೀಣ ಭಾಗದ ಶಾಲೆಗಳ ಸಮಗ್ರ ಅಭಿವೃದ್ಧಿ, ಸರ್ಕಾರಿ ಶಾಲೆಗಳ ಸಬಲೀಕರಣ ಹಾಗೂ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಸಮಾಲೋಚನೆ ನಡೆಸಿ, ಹಲವು ಮೌಲ್ಯಯುತ ಸಲಹೆಗಳನ್ನು ನೀಡಿದರು. ಶಿಕ್ಷಣ ಕ್ಷೇತ್ರದ ಬಗೆಗಿನ ಶ್ರೀಗಳ ಕಾಳಜಿ ಮತ್ತು ದೂರದೃಷ್ಟಿ ನಮಗೆಲ್ಲರಿಗೂ ಸದಾ ಪ್ರೇರಣಾದಾಯಕ.

ಇದೇ ಸಂದರ್ಭದಲ್ಲಿ, ಮುಂಬರುವ ಜನವರಿ 24ರಂದು ನಡೆಯಲಿರುವ ಐತಿಹಾಸಿಕ ಶ್ರೀ ಗವಿಮಠದ ಜಾತ್ರಾ ಮಹೋತ್ಸವಕ್ಕೆ ಆಗಮಿಸಬೇಕೆಂದು ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ ಅವರು ಅತ್ಯಂತ ಆತ್ಮೀಯವಾಗಿ ಆಹ್ವಾನ ನೀಡಿದರು. ಶ್ರೀಗಳ ಆಶೀರ್ವಾದ ಮತ್ತು ಮಾರ್ಗದರ್ಶನ ನಾಡಿನ ಶೈಕ್ಷಣಿಕ ಪ್ರಗತಿಗೆ ಇನ್ನಷ್ಟು ಶಕ್ತಿ ತುಂಬಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

— Ningappa

ಜೆಡಿಎಸ್ ಮುಖಂಡ ಅಂಬರೀಶ್ ಬಿ. ಗಣೇಕಲ್ ನೂತನ ಗೃಹಪ್ರವೇಶ - ಶಾಸಕಿ ಕರೆಮ್ಮ ಜಿ. ನಾಯಕ ಪರವಾಗಿ ಭಾಗಿ, ಶುಭ ಹಾರೈಕೆ - ಅರಕೇರಾ ಜೆಡಿಎಸ್ ಮುಖಂಡರು ಭಾಗಿ



ಜೆಡಿಎಸ್ ಮುಖಂಡ ಅಂಬರೀಶ್ ಬಿ. ಗಣೇಕಲ್ ನೂತನ ಗೃಹಪ್ರವೇಶ - ಶಾಸಕಿ ಕರೆಮ್ಮ ಜಿ. ನಾಯಕ ಪರವಾಗಿ ಕು.ಗೌರಿ ಭಾಗಿ, ಶುಭ ಹಾರೈಕೆ

ದೇವದುರ್ಗ:

ಇಂದು ನಮ್ಮ ಜೆಡಿಎಸ್ ಪಕ್ಷದ ಮುಖಂಡರಾದ ಶ್ರೀ ಅಂಬರೀಶ್ ಬಿ. ಗಣೇಕಲ್ ಅವರ ನೂತನ ಗೃಹಪ್ರವೇಶ ಸಮಾರಂಭದಲ್ಲಿ, ನಮ್ಮ ದೇವದುರ್ಗ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀಮತಿ ಕರೆಮ್ಮ ಜಿ. ನಾಯಕ ಅವರ ಅನುಪಸ್ಥಿತಿಯಲ್ಲಿ, ಅವರ ಪರವಾಗಿ ಕುಮಾರಿ ಗೌರಿ ಅವರು ಭಾಗವಹಿಸಿ

ಈ ಸಂದರ್ಭದಲ್ಲಿ ಅರಕೇರಾ ತಾಲೂಕು ಜೆಡಿಎಸ್ ಅಧ್ಯಕ್ಷರಾದ ಶ್ರೀ ಸಿದ್ದಣ್ಣ ಬಿ. ಗಣೇಕಲ್ ಹಾಗೂ ನಮ್ಮ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಅಂಬರೀಶ್ ಬಿ. ಗಣೇಕಲ್ ಅವರ ನೂತನ ಗೃಹದಲ್ಲಿ ಸದಾ ಸುಖ, ಶಾಂತಿ, ನೆಮ್ಮದಿ ಹಾಗೂ ಸಮೃದ್ಧಿ ನೆಲೆಸಲಿ. ಅವರ ಕುಟುಂಬಕ್ಕೆ ಭಗವಂತ ಆಯುರಾರೋಗ್ಯ, ಸಂತೋಷ ಹಾಗೂ ಯಶಸ್ಸನ್ನು ಕರುಣಿಸಲಿ ಎಂದು ಹೃದಯಪೂರ್ವಕವಾಗಿ ಹಾರೈಸಿದ್ದಾರೆ.

— Ningappa

ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ - ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ದೊರೆ ಪುತ್ಥಳಿಗೆ ಮಾಲಾರ್ಪಣೆ - ಜೆಡಿಎಸ್ ಮುಖಂಡರು, ಕಾರ್ಯಕರ್ತರು ಭಾಗಿ



ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ - ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ದೊರೆ ಪುತ್ಥಳಿಗೆ ಮಾಲಾರ್ಪಣೆ

ಸಿರವಾರ:

ಇಂದು ಸಿರವಾರ ಪಟ್ಟಣದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ದೊರೆ ರವರು ಟಿಪ್ಪು ಸುಲ್ತಾನ್ ಜಯಂತಿಯ ಅಂಗವಾಗಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯ ಆಚರಣೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಸಿರವಾರ ತಾಲೂಕಿನ ಜೆಡಿಎಸ್ ತಾಲೂಕಾಧ್ಯಕ್ಷರಾದ ಟಿ. ಮಲ್ಲಿಕಾರ್ಜುನ ಪಾಟೀಲ್ ಬಲ್ಲಟಗಿ, ಹಿರಿಯ ಮುಖಂಡರಾದ ಜಿ. ಲೋಕರೆಡ್ಡಿ, ಯುವ ಮುಖಂಡರಾದ ರಾಜಾ ಆದರ್ಶ ನಾಯಕ ದೊರೆ, ಸಿರವಾರ ತಾಲೂಕಿನ ಮಹಾ ಪ್ರಧಾನ ಕಾರ್ಯದರ್ಶಿಗಳಾದ ದಾನಪ್ಪ ಸಿರವಾರ, ಸೂಗೂರಯ್ಯ ಸ್ವಾಮಿ ಗಣದಿನ್ನಿ, ನಗರ ಘಟಕದ ಅಧ್ಯಕ್ಷರಾದ ರಂಜಿತ್ ಕುಮಾರ್, ಸಿರವಾರ ತಾಲೂಕಿನ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷರಾದ ವಿಜಯಲಕ್ಷ್ಮಿ, ಹಿರಿಯ ಮುಖಂಡರಾದ ಮೌಲಾ ಸಾಬ್, ಕವಿತಾಳ ಪಟ್ಟಣ ಪಂಚಾಯತಿ ಸದಸ್ಯರಾದ ಖಾಜಾ ಪಾಷ ಹಾಗೂ ರುಕ್ಮದ್ದೀನ್ ಹಾಗೂ ಯುವ ಮುಖಂಡರಾದ ರಂಜಿತ್ ಧಣಿ, ಅಮರೇಶ್ ಗೌಡ ಖರಾಬದಿನ್ನಿ, ಶಾಂತಪ್ಪ ಪಿತಗಲ್, ಯಲ್ಲಪ್ಪ ದೊರೆ, ರಾಮು ಗಿಂಡಿ, ಮಹಿಬೂಬ್ ಸಾಬ್, ಎಂ.ಡಿ. ಇಸ್ಮಾಯಿಲ್, ಬಂದೇನವಾಜ್ ಮುಂತಾದವರು ಉಪಸ್ಥಿತರಿದ್ದರು

— Ningappa

ಬೆಂಗಳೂರಿನಲ್ಲಿ ಉಪಮುಖ್ಯಮಂತ್ರಿಗಳನ್ನು ಭೇಟಿಯಾದ ದೇವದುರ್ಗ ಶಾಸಕಿ ಕರಿಯಮ್ಮ ಜಿ ನಾಯಕ - ಕ್ಷೇತ್ರದ ಸಮಗ್ರ ಅಭಿವೃದ್ಧಿ, ಅನುದಾನ ಬಿಡುಗಡೆಗೆ ಮನವಿ - ಸಕಾರಾತ್ಮಕ ಸ್ಪಂದನೆಗೆ ಧನ್ಯವಾದ



ಬೆಂಗಳೂರಿನಲ್ಲಿ ಉಪಮುಖ್ಯಮಂತ್ರಿಗಳನ್ನು ಭೇಟಿಯಾದ ದೇವದುರ್ಗ ಶಾಸಕಿ ಕರಿಯಮ್ಮ ಜಿ ನಾಯಕ - ಕ್ಷೇತ್ರದ ಸಮಗ್ರ ಅಭಿವೃದ್ಧಿ, ಅನುದಾನ ಬಿಡುಗಡೆಗೆ ಮನವಿ

ಬೆಂಗಳೂರು:

ಇಂದು ಬೆಂಗಳೂರಿನಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳನ್ನು ದೇವದುರ್ಗ ವಿಧಾನ ಸಭಾ ಕ್ಷೇತ್ರದ ಶಾಸಕಿ ಕರಿಯಮ್ಮ ಜಿ ನಾಯಕ ಅವರು ಭೇಟಿಯಾಗಿ ತಮ್ಮ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ, ವಿವಿಧ ಅಭಿವೃದ್ಧಿ ಕಾಮಗಾರಿಗಳು, ಮೂಲಭೂತ ಸೌಕರ್ಯಗಳು ಸುಧಾರಣೆ ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಮತ್ತು ಕುಂದುಕೊರತೆಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

ಕ್ಷೇತ್ರದಲ್ಲಿ ಕೈಗೊಳ್ಳಬೇಕಾದ ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಿ, ಬಾಕಿ ಇರುವ ಕಾಮಗಾರಿಗಳಿಗೆ ವೇಗ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ಉಪಮುಖ್ಯಮಂತ್ರಿಗಳನ್ನು ಭೇಟಿಯಾದ ದೇವದುರ್ಗ ಶಾಸಕಿ ಕರಿಯಮ್ಮ ಜಿ ನಾಯಕ - ಕ್ಷೇತ್ರದ ಸಮಗ್ರ ಅಭಿವೃದ್ಧಿ, ಅನುದಾನ ಬಿಡುಗಡೆಗೆ ಮನವಿ - ಸಕಾರಾತ್ಮಕ ಸ್ಪಂದನೆಗೆ ಧನ್ಯವಾದ



ಬೆಂಗಳೂರಿನಲ್ಲಿ ಉಪಮುಖ್ಯಮಂತ್ರಿಗಳನ್ನು ಭೇಟಿಯಾದ ದೇವದುರ್ಗ ಶಾಸಕಿ ಕರಿಯಮ್ಮ ಜಿ ನಾಯಕ - ಕ್ಷೇತ್ರದ ಸಮಗ್ರ ಅಭಿವೃದ್ಧಿ, ಅನುದಾನ ಬಿಡುಗಡೆಗೆ ಮನವಿ

ಬೆಂಗಳೂರು:

ಇಂದು ಬೆಂಗಳೂರಿನಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳನ್ನು ದೇವದುರ್ಗ ವಿಧಾನ ಸಭಾ ಕ್ಷೇತ್ರದ ಶಾಸಕಿ ಕರಿಯಮ್ಮ ಜಿ ನಾಯಕ ಅವರು ಭೇಟಿಯಾಗಿ ತಮ್ಮ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ, ವಿವಿಧ ಅಭಿವೃದ್ಧಿ ಕಾಮಗಾರಿಗಳು, ಮೂಲಭೂತ ಸೌಕರ್ಯಗಳು ಸುಧಾರಣೆ ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಮತ್ತು ಕುಂದುಕೊರತೆಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

ಕ್ಷೇತ್ರದಲ್ಲಿ ಕೈಗೊಳ್ಳಬೇಕಾದ ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಿ, ಬಾಕಿ ಇರುವ ಕಾಮಗಾರಿಗಳಿಗೆ ವೇಗ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಮಾನ್ಯ ಉಪಮುಖ್ಯಮಂತ್ರಿಗಳಿಗೆ ದೇವದುರ್ಗ ಕ್ಷೇತ್ರದ ಸಮಸ್ತ ಜನತೆಯ ಪರವಾಗಿ ಶಾಸಕಿ ಕರಿಯಮ್ಮ ಜಿ ನಾಯಕ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸಿದ್ದಾರೆ.

ನಮ್ಮ ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದೇ ನನ್ನ ಮೊದಲ ಆದ್ಯತೆ. ಈ ನಿಟ್ಟಿನಲ್ಲಿ ನನ್ನ ಪ್ರಯತ್ನ ನಿರಂತರವಾಗಿರುತ್ತದೆ ಎಂದರು.

— Ningappa

ಭೂ ಗ್ಯಾರಂಟಿ ಯೋಜನೆ: ಅನುಷ್ಠಾನಕ್ಕೆ ಕೈಗೊಳ್ಳಬೇಕಾದ 11 ಪ್ರಮುಖ ಕ್ರಮಗಳು - ರಾಯಚೂರು ಜಿಲ್ಲಾ ಪಂಚಾಯತ್ ಸೂಚನೆ - ನ.2 ರಿಂದ ನ.27 ರವರೆಗೆ ವ್ಯಾಪಕ ಪ್ರಚಾರ



ರಾಯಚೂರು: ಭೂ ಗ್ಯಾರಂಟಿ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸುವ ಉದ್ದೇಶದಿಂದ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕೆಳಕಂಡ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್, ರಾಯಚೂರು ಸೂಚಿಸಿದೆ.

ದಿನಾಂಕ: 02.11.2026 ರಿಂದ 27.11.2026 ರವರೆಗೆ ವ್ಯಾಪಕ ಪ್ರಚಾರ ನಡೆಸಬೇಕು.

ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳು ಹೀಗಿವೆ:

1. ಇ-ಸ್ವತ್ತು ನಮೂನೆ 11A ವಿತರಣೆ: ಭೂ ಗ್ಯಾರಂಟಿ ಯೋಜನೆಯಡಿ ನಮೂನೆ 11A ವಿತರಿಸುವ ಸಂದರ್ಭದಲ್ಲಿ ಮೂಲ ಮಾಲೀಕರ ಆಸ್ತಿಗಳಿಗೆ ಮೊದಲ ಆದ್ಯತೆ ನೀಡಬೇಕು. ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಪಡೆಯಬೇಕು.

2. ಭೂ ಗ್ಯಾರಂಟಿ ಯೋಜನೆಯ ವ್ಯಾಪಕ ಪ್ರಚಾರ: ದಿನಾಂಕ: 02.11.2026 ರಿಂದ 27.11.2026 ರವರೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾಗೃತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ, ಕರಪತ್ರಗಳನ್ನು ವಿತರಿಸಿ, ಕಸ ವಿಲೇವಾರಿ ವಾಹನಗಳಿಂದ ಧ್ವನಿಪ್ರಚಾರ ಕೈಗೊಳ್ಳಿ.

ಠಾಣಾ ವ್ಯಾಪ್ತಿಯಲ್ಲಿನ ಆಸ್ತಿಗಳ ವಿವರಗಳನ್ನು ವಾರ್ಡ್‌ವಾರು, ಗ್ರಾಮವಾರು ಮತ್ತು ಪಂಚಾಯಿತಿವಾರು ವಿಂಗಡಿಸಿ ಸಮಗ್ರ ಪಟ್ಟಿಯನ್ನು ಸಿದ್ಧಪಡಿಸಬೇಕು.

4. ಭೂ ಗ್ಯಾರಂಟಿ ಮೊಬೈಲ್ ಅಪ್ಲಿಕೇಶನ್ ಬಳಕೆ: ನಮೂನೆ 11A ಮತ್ತು 11B ಅರ್ಜಿಗಳಿಗೆ ಸಂಬಂಧಿಸಿದಂತೆ ಮೊಬೈಲ್ ಅಪ್ಲಿಕೇಶನ್ ಮೂಲಕ ಸ್ಥಳ ಪರಿಶೀಲನೆ ಹಾಗೂ ಸರ್ವೆ ಕಾರ್ಯ ಕಡ್ಡಾಯವಾಗಿರುತ್ತದೆ.

5. ಅರ್ಜಿಗಳ ಕಡ್ಡಾಯ ನೋಂದಣಿ: ದಿನಾಂಕ: 01.11.2026 ರಿಂದ ಪ್ರತಿ ಗ್ರಾಮ ಪಂಚಾಯತಿಯು ಕನಿಷ್ಠ 05 ಅರ್ಜಿಗಳನ್ನು ಭೂ ಗ್ಯಾರಂಟಿ ತಂತ್ರಾಂಶದಲ್ಲಿ ನೋಂದಾಯಿಸಿ.

6. 64C, 94CC ಮತ್ತು 94D ಅಡಿಯಲ್ಲಿ ವಿತರಿಸಿದ ಹಕ್ಕುಪತ್ರಗಳು: 24.04.2025 ಕ್ಕಿಂತ ಪೂರ್ವದಲ್ಲಿ ವಿತರಿಸಿದ ಹಕ್ಕುಪತ್ರಗಳ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ದೃಢೀಕರಣದೊಂದಿಗೆ ಪಡೆಯಬೇಕು.

7. ಇ-ಸ್ವತ್ತು ನಮೂನೆ 11B - ಕೃಷಿ ಭೂಮಿಯಲ್ಲಿನ ಕಟ್ಟಡಗಳು: ಕೃಷಿ ಭೂಮಿಯಲ್ಲಿ ಮೂಲ ಮಾಲೀಕರು ನಿರ್ಮಿಸಿಕೊಂಡ ಕಟ್ಟಡಗಳಿಗೆ ಅನ್ವಯವಾಗುವ ನಿಯಮಗಳನ್ವಯ ನಮೂನೆ 11B ವಿತರಿಸಬೇಕು.

8. ಇ-ಸ್ವತ್ತು ನಮೂನೆ 11B - ವಸತಿ ಯೋಜನೆಯ ಮನೆಗಳು: ವಸತಿ ಯೋಜನೆಯಡಿ ನಿರ್ಮಿಸಿದ ಮನೆಗಳಿಗೆ, ಮೂಲ ಮಾಲೀಕರ ಒಪ್ಪಿಗೆ ಪತ್ರ ಹೊಂದಿರುವ ಪ್ರಕರಣಗಳಲ್ಲಿ Non-Transactionalble ಷರತ್ತಿನೊಂದಿಗೆ ನಮೂನೆ 11B ವಿತರಿಸಬೇಕು.

9. Forest Rights Act, 2006 - ಪೂರ್ವಜರಿಂದ ಬಂದಿರುವ ಆಸ್ತಿಗಳು: Forest Rights Act, 2006 ಅಡಿಯಲ್ಲಿ ಅನ್ವಯವಾಗುವ ಪೂರ್ವಜರಿಂದ ಬಂದಿರುವ ಆಸ್ತಿಗಳಿಗೆ Non-Transactionalble ಷರತ್ತಿನೊಂದಿಗೆ ನಮೂನೆ 11B ವಿತರಿಸಬೇಕು.

10. ಆಸ್ತಿಗಳ ವಿಸ್ತೀರ್ಣ ಮತ್ತು ಆಯಾಮಗಳ ತಿದ್ದುಪಡಿ: 2,400 ಚದರ ಅಡಿಗಿಂತ ಹೆಚ್ಚಿರುವ ವಿಸ್ತೀರ್ಣದ ಆಸ್ತಿಗಳಿಗೆ Area and Dimension Correction ಬಾಕಿಯಿರುವ ಮನೆಕಟ್ಟಡಗಳಲ್ಲಿ ಅಂತಹ ಕಾರ್ಯಕರ್ತಗಳ ಇ-ಸ್ವತ್ತು ಲಾಗಿನ್ ಮೂಲಕ ಅನುಮೋದನೆ ಪಡೆದುಕೊಂಡ ನಂತರವೇ ತಿದ್ದುಪಡಿ ಮಾಡಬೇಕು.

11. ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳ ಅಮಾನ್ಯೀಕರಣ: Invalidation ಮಾಡುವ ಸಂದರ್ಭದಲ್ಲಿ ಆಸ್ತಿ ಮಾಲೀಕರಿಗೆ ವಿಚಾರಣೆಗೆ ಅವಕಾಶ ನೀಡಿ (Hearing), ನಿಯಮಾನುಸಾರ ಅಮಾನ್ಯೀಕರಣದ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು.

ವಿಶೇಷ ಸೂಚನೆ: ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸೂಚನೆ: ಮೇಲುಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಭೂ ಗ್ಯಾರಂಟಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಪೂರಕ ಕ್ರಮಗಳನ್ನು ನಿಗದಿತ ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕು. ಅಡಿಟಿಪ್ಪಣಿ: ಈ ಕಾರ್ಯದಲ್ಲಿ ಯಾವುದೇ ವಿಳಂಬ ಅಥವಾ ನಿರ್ಲಕ್ಷ್ಯ ವಹಿಸದಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು.

— Ningappa

ಹಟ್ಟಿ ಚಿನ್ನದಗಣಿಯಲ್ಲಿ ಫುಟ್ಬಾಲ್ ಪಂದ್ಯಾವಳಿ ಫೈನಲ್ ಉದ್ಘಾಟನೆ - ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಮ್. ಶಫೀ ಉದ್ಘಾಟನೆ



ಹಟ್ಟಿ ಚಿನ್ನದಗಣಿಯಲ್ಲಿ ಫುಟ್ಬಾಲ್ ಪಂದ್ಯಾವಳಿ ಫೈನಲ್ ಉದ್ಘಾಟನೆ - ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಮ್. ಶಫೀ ಉದ್ಘಾಟನೆ

ಹಟ್ಟಿ ಚಿನ್ನದಗಣಿ ಕಂಪನಿ ಕ್ರೀಡಾ ಸಂಸ್ಥೆ ಏರ್ಪಡಿಸಿದ ಫುಟ್ಬಾಲ್ ಪಂದ್ಯಾವಳಿ ಫೈನಲ್ ಪಂದ್ಯವನ್ನು ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಎಸ್.ಎಮ್. ಶಫೀ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕ್ರೀಡೆಯಲ್ಲಿ ತೊಡಗುವುದರಿಂದ ಆರೋಗ್ಯವಂತರಾಗಿ ಸದೃಡವಾಗಿರುತ್ತೆವೆ. ಅಲ್ಲದೇ ಮಾನಸಿಕ ಒತ್ತಡಗಳಿಂದಲೂ ಮುಕ್ತರಾಗಿರುತ್ತೆವೆ ಪ್ರತಿಯೊಬ್ಬರೂ ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಯಂಕೋಬ, ಮಹ್ಮದ್ ಹನೀಫ್, ಗೌಸ್ ಮಿಯಾ, ಮುನೀರ್, ಮಿಲ್ ವಿಭಾಗದ ಅಧಿಕಾರಿ ಲೋಕೇಶ್, ಸಹಾಯಕ ಫೋರ್‌ಮನ್ ಈರಪ್ಪ, ಕ್ರೀಡಾ ಸಂಸ್ಥೆಯ ಗೌರವ ಕಾರ್ಯದರ್ಶಿ ಚಂದ್ರಶೇಖರ್, ಹಲವು ಕ್ರೀಡಾ ಅಭಿಮಾನಿಗಳು ಇದ್ದರು.

— Ningappa

ರೈತರು ಸತ್ತ ನಂತರ ಸತ್ಯಾಗ್ರಹ ಮಾಡುತ್ತೀರಾ? ಶಾಸಕಿ ಕರೆಮ್ಮ ನಾಯಕ ವಿರುದ್ಧ ಮುಜಾಹಿದ್ ಮರ್ಚೆಡ್ ಆಕ್ರೋಶರೈತರ ಬೆಳೆ ಒಣಗುತ್ತಿದ್ದರೂ ಶಾಸಕರಿಗೆ ಕಾಳಜಿಯಿಲ್ಲ; ಏಳು ಶಾಸಕರು ಒಗ್ಗಟ್ಟಾದರೆ ಕ್ಷಣಾರ್ಧದಲ್ಲಿ ನೀರು ಬಿಡುಗಡೆ ಸಾಧ್ಯ



*ಶಹಾಪುರ್ ಬ್ರೇಕಿಂಗ್ ನ್ಯೂಸ್**

ರೈತರು ಸತ್ತ ನಂತರ ಸತ್ಯಾಗ್ರಹ ಮಾಡುತ್ತೀರಾ? ಶಾಸಕಿ ಕರೆಮ್ಮ ನಾಯಕ ವಿರುದ್ಧ ಮುಜಾಹಿದ್ ಮರ್ಚೆಡ್ ಆಕ್ರೋಶ

ರೈತರ ಬೆಳೆ ಒಣಗುತ್ತಿದ್ದರೂ ಶಾಸಕರಿಗೆ ಕಾಳಜಿಯಿಲ್ಲ; ಏಳು ಶಾಸಕರು ಒಗ್ಗಟ್ಟಾದರೆ ಕ್ಷಣಾರ್ಧದಲ್ಲಿ ನೀರು ಬಿಡುಗಡೆ ಸಾಧ್ಯ

ಶಹಾಪುರ: ಕೃಷ್ಣಾ ಮೇಲ್ದಂಡೆ ಯೋಜನೆಯ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳಿಗೆ ಡಿಸೆಂಬರ್ ಅಂತ್ಯದವರೆಗೆ ನಿರಂತರ ನೀರು ಹರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ (ರಿ.) ವತಿಯಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಸತ್ಯಾಗ್ರಹದಲ್ಲಿ ರೈತ ಸಂಘದ ರಾಯಚೂರು ಜಿಲ್ಲಾ ಕಾರ್ಯಾಧ್ಯಕ್ಷ ಮುಜಾಹಿದ್ ಮರ್ಚೆಡ್ ಅವರು ದೇವದುರ್ಗ ಶಾಸಕಿ ಕರೆಮ್ಮ ನಾಯಕ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕೃಷ್ಣಭಾಗ್ಯ ಜಲ ನಿಗಮದ ಕಚೇರಿ ಮುಂದೆ ರಾಜ್ಯ ಉಪಾಧ್ಯಕ್ಷ ಲಕ್ಷ್ಮಿಕಾಂತ ಪಾಟೀಲ್ ಮದ್ದರಕಿ ಅವರ ನೇತೃತ್ವದಲ್ಲಿ ನವೆಂಬರ್ 11ರಿಂದ ಆರಂಭಗೊಂಡ ಸತ್ಯಾಗ್ರಹ, ನವೆಂಬರ್ 16ರಂದು ನಡೆದ ಬೃಹತ್ ರ್ಯಾಲಿ ಹಾಗೂ ಇಂದು ನಡೆದ 9ನೇ ದಿನದ ಹೋರಾಟದಲ್ಲಿ ಮೂರನೇ ಬಾರಿ ಭಾಗವಹಿಸಿ ಅವರು ಮಾತನಾಡಿದರು.

ರೈತರು ಮೆಣಸಿನಕಾಯಿ ಸೇರಿದಂತೆ ವಿವಿಧ ಬೆಳೆಗಳನ್ನು ಬೆಳೆಯಲು ಪ್ರತಿ ಎಕರೆಗೆ ಸುಮಾರು ₹1 ಲಕ್ಷದಿಂದ ₹1.5 ಲಕ್ಷದವರೆಗೆ ಬಂಡವಾಳ ಹೂಡಿದ್ದಾರೆ. ಆದರೆ, ಸಮರ್ಪಕ ನೀರು ದೊರೆಯದ ಕಾರಣ ಬೆಳೆಗಳು ಒಣಗುವ ಹಂತ ತಲುಪಿವೆ. ಸಾಲ ಮಾಡಿ ಕೃಷಿ ಮಾಡಿರುವ ರೈತರಿಗೆ ಬೆಳೆ ಕೈಗೆ ಬಾರದಿದ್ದರೆ ಅವರ ಬದುಕು ಬೀದಿಗೆ ಬೀಳಲಿದೆ. ಆದರೂ ಸರ್ಕಾರ ರೈತರ ಕೂಗಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉತ್ತರ ಕರ್ನಾಟಕದ ಜನರು ಹಾಗೂ ರೈತರ ಧ್ವನಿ ವಿಧಾನಸೌಧವನ್ನು ತಲುಪುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಹೋರಾಟಕ್ಕೂ ಮುಂದಾಗಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಎಚ್ಚರಿಸಿದರು.

ಕೃಷ್ಣಾ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ ನೀರಿನ ಮೇಲೆ ಸುಮಾರು ಏಳು ಶಾಸಕರ ಕ್ಷೇತ್ರಗಳ ರೈತರ ಕೃಷಿ ಅವಲಂಬಿತವಾಗಿದೆ. ಈ ಭಾಗದ ಶಾಸಕರು ಒಗ್ಗಟ್ಟಿನಿಂದ ಮನಸ್ಸು ಮಾಡಿದರೆ ಕ್ಷಣಾರ್ಧದಲ್ಲಿ ನೀರು ಬಿಡುಗಡೆ ಮಾಡಿಸಲು ಸಾಧ್ಯವಿದೆ. ಆದರೆ, ರೈತರ ಸಮಸ್ಯೆ ಎದುರಾದಾಗ ಶಾಸಕರು ಮೌನ ವಹಿಸುತ್ತಿದ್ದಾರೆ. ಚುನಾವಣೆ ಬಂದಾಗ ಮಾತ್ರ ರೈತರ ಮತ ಕೇಳಲು ಬರುತ್ತಾರೆ ಎಂದು ಹೊಂದಿರುವವರನ್ನೇ ಮುಂದಿನ ಚುನಾವಣೆಯಲ್ಲಿ ವಿಧಾನಸಭೆಗೆ ಆಯ್ಕೆ ಮಾಡಿ ಕಳುಹಿಸುವ ಮೂಲಕ ಜನರು ಶಾಸಕರಿಗೆ ತಕ್ಕ ಪಾಠ ಕಲಿಸಬೇಕು ಎಂದು ಕರೆ ನೀಡಿದರು.

ವಿಶೇಷವಾಗಿ ದೇವದುರ್ಗ ಕ್ಷೇತ್ರದ ಶಾಸಕಿ ಕರೆಮ್ಮ ನಾಯಕ ಅವರು ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಸತ್ಯಾಗ್ರಹ ನಡೆಸುವುದಾಗಿ ಹೇಳಿ ಹಲವು ದಿನಗಳು ಕಳೆದಿವೆ. ಆದರೆ, ಈವರೆಗೂ ಸತ್ಯಾಗ್ರಹ ಆರಂಭಿಸಿಲ್ಲ. ರೈತರ ಬೆಳೆಗಳು ಸಂಪೂರ್ಣ ಒಣಗಿ, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದ ನಂತರ ಸತ್ಯಾಗ್ರಹ ಮಾಡುತ್ತೀರಾ? ರೈತರ ನೋವು ಮತ್ತು ಸಂಕಷ್ಟ ನಿಮಗೆ ಯಾವಾಗ ಅರ್ಥವಾಗುತ್ತದೆ? ಎಂದು ಮುಜಾಹಿದ್ ಮರ್ಚೆಡ್ ಪ್ರಶ್ನಿಸಿದರು.

ಕೃಷ್ಣಾ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳಿಗೆ ಡಿಸೆಂಬರ್ ಅಂತ್ಯದವರೆಗೆ ನೀರು ಹರಿಸುವ ನಿರ್ಧಾರವನ್ನು ಸರ್ಕಾರ ತಕ್ಷಣ ಕೈಗೊಳ್ಳಬೇಕು. ಇಲ್ಲವಾದಲ್ಲಿ ರೈತರ ಬೆಳೆಗಳಿಗೆ ಉಂಟಾಗುವ ನಷ್ಟ ಹಾಗೂ ರೈತರಿಗೆ ಸಂಭವಿಸಬಹುದಾದ ಅನಾಹುತಗಳಿಗೆ ಸಂಬಂಧಿಸಿದ ಶಾಸಕರೇ ನೇರ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಕೆ ನೀಡಿದರು.

ರೈತರ ಬದುಕು ಹಾಗೂ ಬೆಳೆಗಳನ್ನು ಉಳಿಸಲು ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ಕೂಡಲೇ ಕಾಲುವೆಗಳಿಗೆ ನೀರು ಬಿಡುಗಡೆ ಮಾಡಬೇಕು ಎಂದು ಮುಜಾಹಿದ್ ಮರ್ಚೆಡ್ ಆಗ್ರಹಿಸಿದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಮುದಗಲ್‌ನಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಪ್ರತಿಭಾ ಕಾರಂಜಿ ಕಲೋತ್ಸವ - ಯುವ ನಾಯಕ ಅಭಿಷೇಕ್ ಎಸ್. ಪಾಟೀಲ್ ಬಯ್ಯಾಪುರ ಉದ್ಘಾಟನೆ - ಸುಪ್ತ ಪ್ರತಿಭೆಗೆ ವೇದಿಕೆ ಕಲ್ಪಿಸುವ ಕಾರ್ಯಕ್ರಮ



ಮುದಗಲ್‌ನಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಪ್ರತಿಭಾ ಕಾರಂಜಿ ಕಲೋತ್ಸವ - ಯುವ ನಾಯಕ ಅಭಿಷೇಕ್ ಎಸ್. ಪಾಟೀಲ್ ಬಯ್ಯಾಪುರ ಉದ್ಘಾಟನೆ

ಮುದಗಲ್:

ಇಂದು ಲಿಂಗಸುಗೂರು ತಾಲೂಕಿನ ಮುದಗಲ್ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಪ್ರಾಥಮಿಕ ಶಾಲಾ ಮಕ್ಕಳ ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮದಲ್ಲಿ ಯುವ ನಾಯಕರು ಹಾಗೂ ಯುವಜನತೆಯ ಕಣ್ಮಣಿಯಾದ ಶ್ರೀ ಅಭಿಷೇಕ್ ಎಸ್. ಪಾಟೀಲ್ ಬಯ್ಯಾಪುರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಸಾಂಕೇತಿಕವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಿ, ಅವುಗಳಿಗೆ ಸೂಕ್ತ ವೇದಿಕೆ ಕಲ್ಪಿಸುವಲ್ಲಿ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ. ಇಂತಹ ವೇದಿಕೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ, ಸೃಜನಶೀಲತೆ ಹಾಗೂ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವುದರ ಜೊತೆಗೆ ಅವರ ಭವಿಷ್ಯದ ಸಾಧನೆಗೆ ಭದ್ರ ಬುನಾದಿಯಾಗುತ್ತವೆ. ಶಿಕ್ಷಣದ ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕ್ರೀಡೆಗಳಲ್ಲಿಯೂ ಮಕ್ಕಳು ಆಸಕ್ತಿಯಿಂದ ತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ತಿಳಿಸಿದರು.

ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಸುಜಾತ ಮೇಡಂ, ಶಾಲೆಯ ಮುಖ್ಯ ಗುರುಗಳು, ಎಸ್‌ಟಿಎಂಸಿ ಅಧ್ಯಕ್ಷರು, ವಿವಿಧ ಶಾಲೆಗಳ ಶಿಕ್ಷಕ ವೃಂದದವರು ಹಾಗೂ ಪ್ರತಿಭಾ ಕಾರಂಜಿಯಲ್ಲಿ ಉತ್ಸಾಹದಿಂದ ಭಾಗವಹಿಸಿದ ಮುದ್ದು ಮಕ್ಕಳು ಉಪಸ್ಥಿತರಿದ್ದರು.

— Ningappa

ರಾಯಚೂರು ಐಬಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭೇಟಿ - ಹಿಂದುಳಿದ ವರ್ಗಗಳ ಮುಖಂಡರೊಂದಿಗೆ ರವಿ ಬೋಸರಾಜ ಸಮಾಲೋಚನೆ - ಪಕ್ಷ ಸಂಘಟನೆ ಬಲವರ್ಧನೆ ಕುರಿತು ಚರ್ಚೆ



ರಾಯಚೂರು ಐಬಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭೇಟಿ - ಹಿಂದುಳಿದ ವರ್ಗಗಳ ಮುಖಂಡರೊಂದಿಗೆ ರವಿ ಬೋಸರಾಜ ಸಮಾಲೋಚನೆ

ರಾಯಚೂರು:

ರಾಯಚೂರಿನಲ್ಲಿ ಶಿಕ್ಷಣ ಪ್ರಗತಿ ಪರಿಶೀಲನಾ ಸಭೆ ಹಾಗೂ ಕಾರ್ಯಾಗಾರದಲ್ಲಿ ಭಾಗವಹಿಸಲು ಆಗಮಿಸಿದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ ಅವರನ್ನು ರಾಯಚೂರು ಐಬಿಯಲ್ಲಿ ಹಿಂದುಳಿದ ವರ್ಗಗಳ ಮುಖಂಡರೊಂದಿಗೆ ರವಿ ಬೋಸರಾಜ ಭೇಟಿ ಮಾಡಿ ಆತ್ಮೀಯವಾಗಿ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ಪಕ್ಷದ ಸಂಘಟನಾತ್ಮಕ ಬಲವರ್ಧನೆ

ಹೋರಾಟಕ್ಕೆ ಗ್ರಾಮಸ್ಥರು ಬೆಂಬಲ ವ್ಯಕ್ತಪಡಿಸಿ, ರೈತರ ಒಗ್ಗಟ್ಟು ಮತ್ತು ಹೋರಾಟದ ಸಂಕಲ್ಪಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ನೀರು ನಮ್ಮ ಹಕ್ಕು - ರೈತರ ಉಳಿವಿಗಾಗಿ ನಮ್ಮ ಹೋರಾಟ!

— Ningappa

ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಅವರ ನೂತನ ಭಾವಚಿತ್ರ ಉದ್ಘಾಟನೆ - ಮಾಜಿ ಸಚಿವ ಕೆ ಶಿವನಗೌಡ ನಾಯಕ ಭಾಗಿ - ಸರ್ವಧರ್ಮ ಸೌಹಾರ್ದತೆ, ಸಹಬಾಳ್ವೆ ಸಂದೇಶ ಸಾರಲಿ ಎಂದು ಹಾರೈಕೆ



ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಅವರ ನೂತನ ಭಾವಚಿತ್ರ ಉದ್ಘಾಟನೆ - ಮಾಜಿ ಸಚಿವ ಕೆ ಶಿವನಗೌಡ ನಾಯಕ ಭಾಗಿ

ರಾಯಚೂರು: ಸಿರವಾರ ನಗರದಲ್ಲಿ ಇಂದು ಹಜರತ್ ಟಿಪ್ಪು ಸುಲ್ತಾನ್ ಅವರ ಜಯಂತಿಯ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಟಿಪ್ಪು ಸುಲ್ತಾನ್ ಅವರ ನೂತನ ಭಾವಚಿತ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೆ ಶಿವನಗೌಡ ನಾಯಕ ಭಾಗವಹಿಸಿ ಮಾತನಾಡಿದರು.

ಸರ್ವಧರ್ಮ ಸೌಹಾರ್ದತೆ, ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಸಹಬಾಳ್ವೆಯ ಸಂದೇಶ ಸಾರುವ ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಸಾಮರಸ್ಯದ ಭಾವನೆಯನ್ನು ಮತ್ತಷ್ಟು ಬಲಪಡಿಸಲಿ. ಎಲ್ಲರಿಗೂ ಟಿಪ್ಪು ಸುಲ್ತಾನ್ ಜಯಂತಿಯ ಶುಭಾಶಯಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಸಮಾಜದ ಮುಖಂಡರು ಸೇರಿದಂತೆ ವಿವಿಧ ಸಮಾಜಗಳ ಮುಖಂಡರು, ಗಣ್ಯರು ಹಾಗೂ ಆತ್ಮೀಯರು ಉಪಸ್ಥಿತರಿದ್ದರು

— Ningappa

SPORTS

KL ರಾಹುಲ್ ಮೊದಲ ಭಾರತೀಯ ಓಪನಿಂಗ್ ಬ್ಯಾಟ್ಸ್‌ಮನ್ ಆಗಿ ವಿದೇಶಿ ಪಿಚ್‌ಗಳಲ್ಲಿ 50+ ರನ್ ಗಳಿಸಿ ಇತಿಹಾಸ ರಚಿಸಿದರು



KL ರಾಹುಲ್ Test ಕ್ರಿಕೆಟ್‌ನಲ್ಲಿ ವಿದೇಶಿ ಪಿಚ್‌ಗಳಲ್ಲಿ ಆರಂಭಿಕ ಆಟಗಾರನಾಗಿ 50 ಕ್ಕಿಂತ ಹೆಚ್ಚು ರನ್ ಗಳಿಸುವ ಮೊದಲ ಭಾರತೀಯ ಬ್ಯಾಟ್ಸ್‌ಮನ್ ಎಂದು ಇತಿಹಾಸ ರಚಿಸಿದರು. ಈ ಸಾಧನೆ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾದ ವಿವಿಧ ಪಿಚ್‌ಗಳಲ್ಲಿ ಸಾಧಿಸಲಾಯಿತು.

ಪ್ರತಿ ದೇಶದ ಪಿಚ್‌ಗಳ ವಿಶೇಷ ಸವಾಲುಗಳ ನಡುವೆಯೂ ರಾಹುಲ್‌ದ ಸ್ಥಿರತೆ ಮತ್ತು ತಾಂತ್ರಿಕ ಕೌಶಲ್ಯ ಸ್ಪಷ್ಟವಾಗಿತ್ತು. ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್, ಇಂಗ್ಲೆಂಡ್‌ನ ಸ್ವಿಂಗ್, ನ್ಯೂಜಿಲ್ಯಾಂಡ್‌ನ ಬೌದ್ಧಿಕ ಪಿಚ್‌ಗಳು ಮತ್ತು ಆಸ್ಟ್ರೇಲಿಯಾದ ಬಲವಾದ ಬೌಲಿಂಗ್ ದಾಳಿಗಳಲ್ಲೂ ಅವರು 50 ಕ್ಕಿಂತ ಹೆಚ್ಚು ರನ್ ಗಳಿಸಿ, ತಂಡಕ್ಕೆ ಸ್ಥಿರ ಆರಂಭವನ್ನು ನೀಡಿದರು.

ಈ ಮೈಲಿಗಲ್ಲು ಭಾರತೀಯ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ. ರಾಹುಲ್‌ದ ಈ ಸಾಧನೆ ಭಾರತೀಯ ಓಪನಿಂಗ್ ಬ್ಯಾಟ್ಸ್‌ಮನ್‌ಗಳ ವಿಶ್ವಮಟ್ಟದ ಸ್ಪರ್ಧಾಶೀಲತೆಯನ್ನು ಹೆಚ್ಚಿಸುವುದರ ಜೊತೆಗೆ, ಭವಿಷ್ಯದ ಪೀಳಿಗೆಯ ಆಟಗಾರರಿಗೆ ಪ್ರೇರಣೆ ನೀಡುತ್ತದೆ.

— Santhosh S

ಕಾರ್ಯಾಗಾರ ಉದ್ಘಾಟನೆ - ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.100 ಫಲಿತಾಂಶ ಗುರಿ - ಹಿಂದುಳಿದ ಮಕ್ಕಳಿಗೆ ವಿಶೇಷ ಆದ್ಯತೆ



ರಾಯಚೂರು: ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ. 100 ರಷ್ಟು ಫಲಿತಾಂಶ ಸಾಧಿಸುವ ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಆದ್ಯತೆ ನೀಡುವ ಸಂಬಂಧದ ಮಿಶನ್ 60+ ಎಂಬ ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು.

ಈ ಕಾರ್ಯಾಗಾರದಲ್ಲಿ ಕಲಬುರಗಿ ವಿಭಾಗದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ, ಪ್ರಾಂಶುಪಾಲರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ತಾಲ್ಲೂಕುಗಳ ಎಲ್ಲಾ ಮಾಧ್ಯಮ ಹಾಗೂ ಎಲ್ಲಾ ವಿಷಯಗಳ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಗೆ / ಶಿಕ್ಷಕರಿಗೆ ಫಲಿತಾಂಶವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಳೆದ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಬಹುತೇಕ ಶಾಲೆಗಳಲ್ಲಿ ಶಿಕ್ಷಕರು ವಿಶೇಷ ಆಸಕ್ತಿ ವಹಿಸಿ ಹೆಚ್ಚುವರಿ ತರಗತಿಗಳನ್ನು ನಡೆಸಿ, ಮಕ್ಕಳಿಗೆ ಕಲಿಕೆಗೆ ಪೂರಕವಾದ ಅವಕಾಶಗಳನ್ನು ಕಲ್ಪಿಸಿದ ಪರಿಣಾಮ ಉತ್ತಮ ಫಲಿತಾಂಶ ಸಾಧಿಸಲು ಸಾಧ್ಯವಾಗಿದೆ. ಈ ಬಾರಿಯೂ ಅದೇ ಬದ್ಧತೆ ಮತ್ತು ಪರಿಶ್ರಮದೊಂದಿಗೆ ಕಾರ್ಯನಿರ್ವಹಿಸಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತಮ ಅಂಕ ಗಳಿಸುವಂತೆ ಸಿದ್ಧಪಡಿಸಬೇಕು. ಶೇ.100ರಷ್ಟು ಫಲಿತಾಂಶ ಸಾಧಿಸುವ ಗುರಿಯನ್ನು ಎಲ್ಲರೂ ಹೊಂದಬೇಕು ಎಂದು ಸೂಚಿಸಿದೆ. ಶಿಕ್ಷಕರು ಮತ್ತು ಅಧಿಕಾರಿಗಳು ಮುಕ್ತ ಮನಸ್ಸಿನಿಂದ ಸಹಕರಿಸಿ ಮಿಷನ್-60+ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದರ ಜತೆಗೆ ಅವರಲ್ಲಿ ಸಕಾರಾತ್ಮಕ ಬದಲಾವಣೆ ತರಬೇಕು ಎಂದು ಹೇಳಿದೆ.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ವಿ. ರಶ್ಮಿ ಮಹೇಶ್, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕ ಎಸ್. ಭರತ್, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಅವಿನಾಶ್ ಶಿಂಧೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ನಿರ್ದೇಶಕಿ ಅನಿತಾ ನಜಾರೆ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕಿ ಮಂಗಳ ನಾಯಕಿ ಸೇರಿದಂತೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

— Ningappa

ಸುಣಕಲ್‌ನಲ್ಲಿ ಮಾಜಿ ಸಚಿವ ಆರ್.ಬಿ. ತಿಮ್ಮಾಪುರ ಅವರ ನೂತನ ಸಕ್ಕರೆ ಕಾರ್ಖಾನೆ ಪೂಜಾ ಕಾರ್ಯಕ್ರಮ - ಎಂಎಲ್‌ಸಿ ಶರಣಗೌಡ ಬಯ್ಯಾಪೂರ ಭಾಗಿ - ರೈತರ ಬದುಕಿಗೆ ಹೊಸ ಭರವಸೆಯಾಗಲಿ ಎಂದು ಹಾರೈಕೆ



ಸುಣಕಲ್‌ನಲ್ಲಿ ಮಾಜಿ ಸಚಿವ ಆರ್.ಬಿ. ತಿಮ್ಮಾಪುರ ಅವರ ನೂತನ ಸಕ್ಕರೆ ಕಾರ್ಖಾನೆ ಪೂಜಾ ಕಾರ್ಯಕ್ರಮ - ಎಂಎಲ್‌ಸಿ ಶರಣಗೌಡ ಬಯ್ಯಾಪೂರ ಭಾಗಿ

ಲಿಂಗಸುಗೂರು: ಇಂದು ಲಿಂಗಸುಗೂರು ತಾಲೂಕಿನ ಸುಣಕಲ್ ಗ್ರಾಮದಲ್ಲಿ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಆರ್.ಬಿ. ತಿಮ್ಮಾಪುರ ಅವರ ನೂತನವಾಗಿ ನಿರ್ಮಾಣಗೊಂಡಿರುವ ಸಕ್ಕರೆ ಕಾರ್ಖಾನೆಯ ಪೂಜಾ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಶರಣಗೌಡ ಬಯ್ಯಾಪೂರ ಅವರು ಬದುಕಿಗೆ ಹೊಸ ಭರವಸೆಯಾಗಲಿ, ಕಬ್ಬು ಬೆಳೆಗಾರರ ಆರ್ಥಿಕ ಪ್ರಗತಿಗೆ ಸಹಕಾರಿಯಾಗಲಿ ಹಾಗೂ ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಈ ಭಾಗದ ಸಮಗ್ರ ಅಭಿವೃದ್ಧಿಗೆ ಮುನ್ನುಡಿಯಾಗಲಿ ಎಂದು ಹಾರೈಸುತ್ತೇನೆ.

— Ningappa

WEATHER

ಅಕ್ವಾನ್ ಚಂಡಮಾರುತ: ಬಂಗಾಳ ಕೊಳ್ಳಿಯಿಂದ ಆಂಧ್ರ-ಒಡಿಶಾ ಕರಾವಳಿಯತ್ತ ಸಾಗುತ್ತಿದೆ, ಕರ್ನಾಟಕದಲ್ಲಿ 5 ದಿನಗಳ ಒಣ ಹವಾಮಾನ



ಬಂಗಾಳ ಕೊಳ್ಳಿಯಲ್ಲಿ ತೀವ್ರ ಗೊಂಡಿರುವ 'ಅಕ್ವಾನ್' ಚಂಡಮಾರುತವು ಆಂಧ್ರ ಮತ್ತು ಒಡಿಶಾ ಕರಾವಳಿಯತ್ತ ಸಾಗುತ್ತಿದೆ. ಈ ಚಂಡಮಾರುತದ ಪರಿಣಾಮವಾಗಿ ಕರ್ನಾಟಕದಲ್ಲಿ ಮುಂದಿನ 5 ದಿನಗಳ ಕಾಲ ಒಣ ಹವಾಮಾನ ಮುಂದುವರಿಯಲಿದೆ.

ವಿಶೇಷವಾಗಿ ಉತ್ತರ ಕರ್ನಾಟದ ಜಿಲ್ಲೆಗಳಲ್ಲಿ ಅತ್ಯಂತ ಒಣಗುವಿಕೆ ಕಾಣಿಸಿಕೊಳ್ಳಲಿದೆ, ಇದರಿಂದ ಕೃಷಿ ಮತ್ತು ನೀರಿನ ಸರಬರಾಜು ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಇದೇ ಸಮಯದಲ್ಲಿ, ಉತ್ತರ ಕರ್ನಾಟದ ಜಿಲ್ಲೆಗಳಲ್ಲಿ ಮೈ ನಡುಗುವ ಚಳಿ ಉಂಟಾಗಲಿದೆ, ಇದು ನಿವಾಸಿಗಳಿಗೆ ಅಸೌಕರ್ಯ ಉಂಟುಮಾಡಬಹುದು.

— Santhosh S

ಮಹರ್ಷಿ ವಾಲ್ಮೀಕಿಯವರ ವಿಚಾರಗಳು ಕೇವಲ ಒಂದು ಜನಾಂಗಕ್ಕೆ ಸೀಮಿತವಾಗಬಾರದು: ಸಂಸದ ಜಿ.ಕುಮಾರ ನಾಯಕ - ರಾಯಚೂರಿನಲ್ಲಿ ವಾಲ್ಮೀಕಿ ಜಯಂತಿ ಹಾಗೂ ವಿಚಾರ ಸಂಕೀರ್ಣ ಉದ್ಘಾಟನೆ



ಮಹರ್ಷಿ ವಾಲ್ಮೀಕಿಯವರ ವಿಚಾರಗಳು ಕೇವಲ ಒಂದು ಜನಾಂಗಕ್ಕೆ ಸೀಮಿತವಾಗಬಾರದು: ಸಂಸದ ಜಿ.ಕುಮಾರ ನಾಯಕ

ರಾಯಚೂರು: ಮಹರ್ಷಿ ವಾಲ್ಮೀಕಿಯವರ ತತ್ತ್ವಾದರ್ಶಗಳು, ಸಂದೇಶಗಳು ಮತ್ತು ಮೌಲ್ಯಗಳು ಕೇವಲ ಒಂದು ನಿರ್ದಿಷ್ಟ ಸಮುದಾಯ ಅಥವಾ ಜನಾಂಗಕ್ಕೆ ಸೀಮಿತವಾಗಬಾರದು: ಅವು ಸಮಾಜದ ಎಲ್ಲ ವರ್ಗದ ಜನರನ್ನು ಒಗ್ಗೂಡಿಸುವಂತಿರಬೇಕು ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ ನಾಯಕ ಅಭಿಪ್ರಾಯಪಟ್ಟರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ರಾಯಚೂರು ವತಿಯಿಂದ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಮಹರ್ಷಿ ವಾಲ್ಮೀಕಿ ಚಿಂತನೆಗಳು: ಒಂದು ಅನುಸಂಧಾನ ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ಮಹಾಪುರುಷರ ವಿಚಾರಗಳು ಹಾಗೂ ಬರವಣಿಗೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ತಾವು ಸರ್ಕಾರದ ಸೇವೆಯಲ್ಲಿದ್ದಾಗ ಬೆಂಗಳೂರಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BSE) ಸ್ಥಾಪಿಸುವ ಸಂದರ್ಭದಲ್ಲಿ, ಪ್ರತಿ ಸೆಮಿಸ್ಟರ್‌ನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆರ್ಥಿಕ ಕೊಡುಗೆಗಳ ಕುರಿತಾದ ಕೋರ್ಸ್ ಅಳವಡಿಸಲು ಕೈಗೊಂಡ ಕ್ರಮಗಳನ್ನು ಈ ವೇಳೆ ಅವರು ಸ್ಮರಿಸಿದರು.

ಆಚರಿಸುವುದರ ಜೊತೆಗೆ, ಶೈಕ್ಷಣಿಕ ಹಾಗೂ ಬೌದ್ಧಿಕ ವಲಯದಲ್ಲಿ ಮಹಾಪುರುಷರ ಹಾಗೂ ಮಹರ್ಷಿ ವಾಲ್ಮೀಕಿಯವರ ವಿಚಾರಗಳನ್ನು ನಿರಂತರವಾಗಿ ಪಸರಿಸಬೇಕು. ಸಂವಿಧಾನದ ಆಶಯದಂತೆ ಸಮಾಜದಲ್ಲಿ ಸಮಾನತೆ ಹಾಗೂ ಭ್ರಾತೃತ್ವ ಭಾವನೆಯನ್ನು ಬೆಳೆಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮತ್ತು ವಿಚಾರ ಸಂಕೀರ್ಣಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಮಹರ್ಷಿ ವಾಲ್ಮೀಕಿಗಳ ಕುರಿತಂತೆ ಪಠ್ಯವನ್ನು ರಚಿಸಿ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಸಲಹೆ ನೀಡಿದರು. ಅಲ್ಲದೇ ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿದರು. ಈ ಭಾಗದ ಅಭಿವೃದ್ಧಿಗೆ ಪ್ರತಿಯೊಬ್ಬರು ಶ್ರಮಿಸುವ ಮೂಲಕ ನಮಗಿರುವ ಹಿಂದುಳಿದ ಹಣೆಪಟ್ಟಿಯನ್ನು ಕಳಚಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ, ಕುಲಸಚಿವ (ಆಡಳಿತ) ಡಾ. ಎ. ಚನ್ನಪ್ಪ, ಮೌಲ್ಯಮಾಪನ ಕುಲಸಚಿವರಾದ ಪ್ರೊ. ವಿರುಪಾಕ್ಷಯ್ಯ ಡಿ.ಜಿ.ಎಂ., ಹಣಕಾಸು ಅಧಿಕಾರಿಗಳಾದ ಡಾ. ಎಂ.ಎಸ್. ಲತಾ, ಡಾ. ವೆಂಕಟೇಶ್ ಸೇರಿದಂತೆ ವಿಶ್ವವಿದ್ಯಾಲಯ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

— Ningappa

ಬಾದಾಮಿ ನಗರದ ಬಸ್ಟ್ಯಾಂಡಿನಲ್ಲಿ ಪಿಕ್ ಪಾಕೆಟ್ ಮಾಡಿ ರೂ.50,000 ಕದ್ದುಕೊಂಡು ಹೋಗುತ್ತಿರುವ ಕಳ್ಳ



ಬಾದಾಮಿ ನಗರದ ಬಸ್ಟ್ಯಾಂಡಿನಲ್ಲಿ ಪಿಕ್ ಪಾಕೆಟ್ ಮಾಡಿ ರೂ.50,000 ಕದ್ದುಕೊಂಡು ಹೋಗುತ್ತಿರುವ ಕಳ್ಳನನ್ನು ಸಾರ್ವಜನಿಕರು ಹಿಡಿದು ಸರಿಯಾದ ಪಾಠ ಕಲಿಸಿದ್ದಾರೆ ನಂತರ ಪೊಲೀಸರ ವಶಕ್ಕೆ ಕಳ್ಳನನ್ನು ಒಪ್ಪಿಸಿದ್ದಾರೆ

— Banneppa Kuntoji

LOCAL

ಬೆಂಗಳೂರು 88 ರಸ್ತೆಗಳಿಗಾಗಿ 2321 ಕೋಟಿ ರೂ. ವೆಚ್ಚದ ವೈಟ್ ಟ್ಯಾಪಿಂಗ್ ಅನುಮೋದನೆ



ಬೇಗಲಿನ ರಾಜ್ಯ ಸಮಿತಿಯು ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತಲಿನ 88 ರಸ್ತೆಗಳ ಸುಧಾರಣೆಗೆ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಒಟ್ಟು 130.85 ಕಿ.ಮೀ ಉದ್ದದ ಈ ರಸ್ತೆಗಳಿಗಾಗಿ 2321.17 ಕೋಟಿ ರೂ. ವೆಚ್ಚದ ವೈಟ್ ಟ್ಯಾಪಿಂಗ್ ಪ್ರಾಜೆಕ್ಟ್‌ಗೆ ಅನುಮತಿ ನೀಡಲಾಗಿದೆ.

ಈ ಪ್ರಾಜೆಕ್ಟ್ ಅನ್ನು 12 ಪ್ಯಾಕೇಜ್‌ಗಳಾಗಿ ವಿಭಜಿಸಿ, ಕ್ರಮಬದ್ಧವಾಗಿ ಕಾರ್ಯಗತಗೊಳಿಸಲಾಗುವುದು. ಪ್ರತಿ ಪ್ಯಾಕೇಜ್‌ಗಾಗಿ ನಿರ್ದಿಷ್ಟ ಸಮಯಸೀಮೆ ಮತ್ತು ಗುಣಮಟ್ಟದ ಮಾನದಂಡಗಳನ್ನು ಪಾಲಿಸುವ ಮೂಲಕ, ರಸ್ತೆಗಳ ದೀರ್ಘಕಾಲಿಕ ಸ್ಥಿರತೆ ಮತ್ತು ಸುರಕ್ಷತೆಯನ್ನು ಖಾತ್ರಿಪಡಿಸುವ ಉದ್ದೇಶವಿದೆ.

ರಾಜ್ಯ ಸರ್ಕಾರ ಈ ವೆಚ್ಚವನ್ನು ವಿಶೇಷ ಅನುದಾನವಾಗಿ ಒದಗಿಸುವ ಮೂಲಕ, ನಗರ ಮೂಲಸೌಕರ್ಯ ಅಭಿವೃದ್ಧಿಗೆ ಬಲವಾದ ಬೆಂಬಲ ನೀಡುತ್ತಿದೆ. ಇದರಿಂದ ಸಂಚಾರ ಸುಗಮವಾಗುವುದು, ವಾಹನಗಳ ಇಂಧನ ಬಳಕೆ ಕಡಿಮೆಯಾಗುವುದು ಮತ್ತು ಪರಿಸರದ ಮೇಲೆ ಹಾನಿ ಕಡಿಮೆಯಾಗುವ ನಿರೀಕ್ಷೆ ಇದೆ.

ಈ ಯೋಜನೆ ಪೂರ್ಣಗೊಂಡ ನಂತರ, ಬೆಂಗಳೂರು ನಗರದಲ್ಲಿ ಪ್ರಯಾಣಿಕರು ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸುಲಭ ಮತ್ತು ಸುರಕ್ಷಿತ ರಸ್ತೆ ಪರಿಸರ ಲಭ್ಯವಾಗುತ್ತದೆ.

ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ: ರಾಜಾ ವೆಂಕಟಪ್ಪ ನಾಯಕ ದೊರೆಯಿಂದ ಪುತ್ಥಳಿಗೆ ಮಾಲಾರ್ಪಣೆ



ಸಿರವಾರ ಬ್ರೇಕಿಂಗ್ ನ್ಯೂಸ್

ಸಿರವಾರದಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ: ರಾಜಾ ವೆಂಕಟಪ್ಪ ನಾಯಕ ದೊರೆಯಿಂದ ಪುತ್ಥಳಿಗೆ ಮಾಲಾರ್ಪಣೆ

ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ಜಯಂತಿ ಕಾರ್ಯಕ್ರಮ

ಸಿರವಾರ, ನ. 20: ಸಿರವಾರ ಪಟ್ಟಣದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಟಿಪ್ಪು ಸುಲ್ತಾನ್ ಜಯಂತಿಯನ್ನು ಆಚರಿಸಲಾಯಿತು. ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ದೊರೆ ಅವರು ಟಿಪ್ಪು ಸುಲ್ತಾನ್ ಜಯಂತಿಯ ಅಂಗವಾಗಿ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸಿರವಾರ ತಾಲೂಕು ಜೆಡಿಎಸ್ ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಪಾಟೀಲ್ ಬಲ್ಲಟಗಿ, ಹಿರಿಯ ಮುಖಂಡರಾದ ಜಿ. ಲೋಕರೆಡ್ಡಿ, ಯುವ ಮುಖಂಡ ರಾಜಾ ಆದರ್ಶ ನಾಯಕ ದೊರೆ, ತಾಲೂಕು ಮಹಾ ಪ್ರಧಾನ ಕಾರ್ಯದರ್ಶಿ ದಾನಪ್ಪ ಸಿರವಾರ, ನಗರ ಘಟಕದ ಅಧ್ಯಕ್ಷ ರಂಜಿತ್ ಕುಮಾರ್, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ವಿಜಯಲಕ್ಷ್ಮಿ, ಹಿರಿಯ ಮುಖಂಡ ಮೌಲಾ ಸಾಬ್ ಉಪಸ್ಥಿತರಿದ್ದರು.

ಇದೇ ವೇಳೆ ಕವಿತಾಳ ಪಟ್ಟಣ ಪಂಚಾಯಿತಿ ಸದಸ್ಯರಾದ ಖಾಜಾ ಪಾಷಾ ಹಾಗೂ ರುಕ್ಮದ್ದೀನ್, ಯುವ ಮುಖಂಡರಾದ ರಂಜಿತ್ ಧಣಿ, ಅಮರೇಶ್ ಗೌಡ ಖರಾಬದಿನ್ನಿ, ಶಾಂತಪ್ಪ ಪಿತಗಲ್, ಯಲ್ಲಪ್ಪ ದೊರೆ, ರಾಮು ಗಿಂಡಿ, ಮಹಿಬೂಬ್ ಸಾಬ್, ಎಂ.ಡಿ. ಇಸ್ಮಾಯಿಲ್, ಬಂದೇನವಾಜ್ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ವರದಿ ಖಾಜಾ ಹುಸೇನ್ ಬಾಬಾ

ಜಾಲಹಳ್ಳಿ

— Khaja Hussain

ಜಾಲಹಳ್ಳಿಯಲ್ಲಿ ಅದ

ಆಯೇಷಾ ಅವರು ಟಿಪ್ಪು ಸುಲ್ತಾನ್ ಅವರ ಜೀವನ ಮತ್ತು ಸಾಧನೆಗಳ ಕುರಿತು ಕಿರು ಪರಿಚಯ ನೀಡಿದರು. ಬಳಿಕ ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಟಿಪ್ಪು ಸುಲ್ತಾನ್ ಸಂಘದ ಅಧ್ಯಕ್ಷ ಹೈದರ್ ಸಾಬ್ ಮುಲ್ಲಾ, ಕಾರ್ಯದರ್ಶಿ ಖುರ್ಶಿದ್ ಪಟೇಲ್, ಹಾಜಿ ಖಾಜಾ ಹುಸೇನ್ ಬಾಂಬೆ ಸೇಠ್ ಹಾಗೂ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೋವಿಂದಪ್ಪ ಆಲಗೇರಿ ಸೇರಿದಂತೆ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರಹಮಾನ್ ಖುರೇಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಟಿಪ್ಪು ಸುಲ್ತಾನ್ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ ವೀರರಾಗಿದ್ದರು. ಅವರ ಆಡಳಿತದಲ್ಲಿ ಕೈಗೊಂಡ ವಿವಿಧ ಸುಧಾರಣೆಗಳು ಹಾಗೂ ಸಾಧನೆಗಳನ್ನು ಸ್ಮರಿಸಿದರು.

ವಕೀಲ ವೆಂಕನಗೌಡ ಅವರ ಅಭಿಪ್ರಾಯ

ಟಿಪ್ಪು ಸುಲ್ತಾನ್ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಯುದ್ಧದಲ್ಲಿ ತಮ್ಮ ಮಕ್ಕಳನ್ನೂ ಒತ್ತೆಯಿಡುವ ಪರಿಸ್ಥಿತಿ ಎದುರಿಸಿದ್ದರು. ಜಾತಿಭೇದವಿಲ್ಲದೆ ಹಲವು ಸುಧಾರಣೆಗಳನ್ನು ಕೈಗೊಂಡ ಆಡಳಿತಗಾರರಾಗಿದ್ದರು ಎಂದು ವಕೀಲ ವೆಂಕನಗೌಡ ಹೇಳಿದರು.

ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕು: ರಂಗಣ್ಣ ಕೊಲ್ಕರ್

ಅಪಪ್ರಚಾರ ಮಾಡುವ ಮೂಲಕ ತಪ್ಪು ಸಂದೇಶ ಹರಡುತ್ತಿದ್ದಾರೆ. ಇದು ಟಿಪ್ಪು ಸುಲ್ತಾನ್ ವಿರುದ್ಧ ಮಾತ್ರವಲ್ಲ, ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಮನೋಭಾವವಾಗಿದೆ ಎಂದು ರಂಗಣ್ಣ ಕೊಲ್ಕರ್ ಅಭಿಪ್ರಾಯಪಟ್ಟರು. ನಾವೆಲ್ಲರೂ ಸಂವಿಧಾನವನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಹಾಗೂ ಟಿಪ್ಪು ಸುಲ್ತಾನ್ ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ಕರೆ ನೀಡಿದರು.

ಟಿಪ್ಪು ಸುಲ್ತಾನ್ ಅವರ ಸುಧಾರಣೆಗಳನ್ನು ಸ್ಮರಿಸಿದ ಗಿರಿಯಪ್ಪ ಪೂಜಾರಿ

ಟಿಪ್ಪು ಸುಲ್ತಾನ್ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ವೀರಮರಣವನ್ನಪ್ಪಿದವರು. ಮರಾಠರು ದಾಳಿ ಮಾಡಿದ ಶೃಂಗೇರಿ ಮಠದ ಪುನರ್ ಅಭಿವೃದ್ಧಿಗೆ ನೆರವಾದದ್ದು, ದಲಿತರಿಗೆ ಭೂಮಿ ಹಂಚಿಕೆ ಸೇರಿದಂತೆ ವಿವಿಧ ಸುಧಾರಣೆಗಳನ್ನು ಕೈಗೊಂಡಿದ್ದ ಅವರ ಕಾರ್ಯಗಳನ್ನು ಸ್ಮರಿಸಬೇಕು ಎಂದು ಗಿರಿಯಪ್ಪ ಪೂಜಾರಿ ಹೇಳಿದರು.

ಕಾರ್ಯಕ್ರಮವನ್ನು ಜಾಮಿಯಾ ಮಸೀದಿ ಅಧ್ಯಕ್ಷರು ಹಾಗೂ ಬಾಬಾ ಮೆಡಿಕಲ್‌ನವರು ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು.

ಗೋವಿಂದಪ್ಪ ಆಲಗೇರಿ, ಭೀಮಣ್ಣ ಗುಮ್ಮಾರ್, ಮಧುರಂಗ ವಟಾರ್, ಯಾಸಿನ್ ಮುಲ್ಲಾ, ಹಾಜಿ ಖಾಜಾ ಹುಸೇನ್ ಬಾಂಬೆ ಸೇಠ್, ರಂಗಣ್ಣ ಕೊಲ್ಕರ್, ವೆಂಕೋಬ ಪೂಜಾರಿ, ಶಂಕರಗೌಡ ಪಾಟೀಲ್, ಭೀಮಣ್ಣ ವಿರಗೂಟ, ರಂಗಪ್ಪ ಬಂಡಿ, ವೆಂಕನಗೌಡ ವಕೀಲರು, ಸಾಬಣ್ಣ ಹೂಗಾರ, ಶಿವು ಪಾಟೀಲ್ ಗಾಣದಾಳ, ರಾಜ್ ಮೊಹಮ್ಮದ್ ಸನ್ನೋಬತ್, ಜಾಕಿರ್ ಹುಸೇನ್ ಆರ್ತಿ, ಮುಕ್ತಾರ್ ಅಹ್ಮದ್ ಹುಸೇನ್ ನಾಸಿ, ನೂರ್ ಮೊಹಮ್ಮದ್ ಬಳಿಗೆರ್, ರಮೇಶ್ ಬಾಗೂರು, ಭೂತಪ್ಪ ದೇವರಮನೆ, ರಂಗಪ್ಪ ತೊಗರಿ, ಹುಸೇನಪ್ಪ ಗುತ್ತೇದಾರ, ಮಾನಪ್ಪ ಕಾವಲಿ, ಹೈದರ್ ಸಾಬ್ ಮುಲ್ಲಾ, ಖುರ್ಶಿದ್ ಪಟೇಲ್ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಾದ ಮಕತುಮ್ ಪರಾಶಿ, ಬಸವರಾಜ್ ಗೋಪಾಲಪುರ, ರಂಗಪ್ಪ ಕುದುರೆ, ಕುಮಾರ್ ಚಪ್ಪಳಕಿ, ಅಬ್ದುಲ್ ರೆಹಮಾನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪತ್ರಕರ್ತರಾದ ಗಿರಿಯಪ್ಪ ಪೂಜಾರಿ, ಅಲಿ ಬಾಬಾ ಪಟೇಲ್, ಮೌನೇಶ್ ಜಾಲಹಳ್ಳಿ, ತಾತಪ್ಪ ನಾಯಕ, ರಾಜು ನಾಯಕ, ರಾಜ್ಯ ಕಾರ್ಮಿಕ ಮುಖಂಡ ಶಬ್ಬೀರ್ ಜಾಲಹಳ್ಳಿ, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಮಹಾಲಿಂಗ ದೊಡ್ಮನಿ, ಡಿವೈಎಫ್‌ಐ ಜಿಲ್ಲಾಧ್ಯಕ್ಷ ರಾಜು ನಾಯಕ, ತಾಲೂಕು ಅಧ್ಯಕ್ಷ ರಿಯಾಜ್ ಆರ್ತಿ, ಮಹೇಬುಬ್ ಪರಾಶಿ, ಮಹೇಬೂಬ್ ಕುರಕುಂದಿ, ಮುಸ್ತಫಾ ಯಾದಗಿರಿ, ಇದ್ರಿಸ್, ಇಮಾಮ್ ಸಾಬ್ ಉದ್ದಾರ್, ಜಹಿರ್ ಮೂರ್ಶೆದ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ರಾಜಕೀಯ ಮುಖಂಡರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

SPORTS

ನ್ಯೂಜಿಲೆಂಡ್ ಟೆಸ್ಟ್ ನಂತರ ಮೊಹಮ್ಮದ್ ಸಿರಾಜ್ ಆಯ್ಕೆಗೆ ವಿರೋಧ ವ್ಯಕ್ತಪಡಿಸಿದ ಸುನಿಲ್ ಗವಾಸ್ಕರ್



ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್, ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ವೇಗಿ ಮೊಹಮ್ಮದ್ ಸಿರಾಜ್ ಅವರನ್ನು ಕೈಬಿಟ್ಟಿರುವ ನಿರ್ಧಾರಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ನ್ಯಾಯತೆಯ ಬಗ್ಗೆ ಪ್ರಶ್ನೆ ಎತ್ತಿದ್ದಾರೆ.

ಸಿರಾಜ್ ಅವರ ಪ್ರದರ್ಶನ ಮತ್ತು ತಂಡದ ಸಮತೋಲನವನ್ನು ಗಮನಿಸಿ, ಆಯ್ಕೆ ಸಮಿತಿಯು ತೆಗೆದುಕೊಂಡ ಈ ನಿರ್ಧಾರವನ್ನು ಗವಾಸ್ಕರ್ ಟೀಕಿಸಿ, ಆಯ್ಕೆ ಮಾನದಂಡಗಳ ಸ್ಪಷ್ಟತೆ ಮತ್ತು ಆಟಗಾರರ ಹಕ್ಕುಗಳ ರಕ್ಷಣೆಗೆ ಕರೆ ನೀಡಿದ್ದಾರೆ.

ಈ ವಿವಾದದ ಪರಿಣಾಮವಾಗಿ, ಭಾರತೀಯ ಕ್ರಿಕೆಟ್ ಮಂಡಳಿ ಮತ್ತು ಆಯ್ಕೆ ಸಮಿತಿಯ ಒಳಗೆ ತಂಡದ ಆಯ್ಕೆಯ ಬಗ್ಗೆ ಚರ್ಚೆ ಹೆಚ್ಚಾಗಿದೆ. ವಿವಿಧ ವಿಶ್ಲೇಷಕರು ಮತ್ತು ಅಭಿಮಾನಿಗಳು ಈ ವಿಷಯದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದು, ಮುಂದಿನ ಪಂದ್ಯಗಳಲ್ಲಿ ಆಯ್ಕೆ ಪ್ರಕ್ರಿಯೆ ಹೇಗೆ ಬದಲಾಗುತ್ತದೆ ಎಂಬುದನ್ನು ಗಮನಿಸುತ್ತಿದ್ದಾರೆ.

ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಆಡಳಿತ ಮಂಡಳಿ ಈ ವಿಷಯವನ್ನು ಪರಿಹರಿಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂದು ನಿರೀಕ್ಷೆ ಇದೆ.

— Ganesh S

SPORTS

ಶ್ರೇಯಾಂಕಾ ಪಾಟೀಲ್ 71 ರನ್‌ಗಳ ಅಜೇಯ ಪ್ರದರ್ಶನ, 29 ಎಸೆತಗಳಲ್ಲಿ 20 ಎಸೆತಗಳಲ್ಲಿ ಅರ್ಧಶತಕ



ಶ್ರೇಯಾಂಕಾ ಪಾಟೀಲ್ ಅವರು ದೇಶೀಯ ಟಿ20 ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ 29 ಎಸೆತಗಳಲ್ಲಿ 71 ರನ್ ಗಳಿಸಿ ಅಜೇಯ ಪ್ರದರ್ಶನ ನೀಡಿದರು.

ಅವಳ ದಾಳಿಯ ಶಕ್ತಿ ಸ್ಪಷ್ಟವಾಗಿದ್ದು, 20 ಎಸೆತಗಳಲ್ಲಿ ಅರ್ಧಶತಕ (50 ರನ್) ಗಳಿಸಿ, ಉಳಿದ 9 ಎಸೆತಗಳಲ್ಲಿ ಹೆಚ್ಚುವರಿ 21 ರನ್ ಗಳಿಸಿ ವೇಗದ ರನ್‌ಸ್ಕೋರ್ ನಿರ್ಮಿಸಿದರು.

ಈ ಅಂಕಿ-ಅಂಶಗಳು ತಂಡದ ಒಟ್ಟು ಗುರಿ ಮತ್ತು ಟೂರ್ನಿ ಸ್ಥಿತಿಗೆ ಮಹತ್ವದ ಕೊಡುಗೆ ನೀಡಿದ್ದು, ಆಯೋಜಕರು ಮತ್ತು ಸಹ ಆಟಗಾರರು ಅವಳನ್ನು ಪ್ರಶಂಸಿಸಿದರು.

ಶ್ರೇಯಾಂಕಾ ಪಾಟೀಲ್ ಅವರ ಈ ಪ್ರದರ್ಶನವು ಕರ್ನಾಟಕದ ಟಿ20 ತಂಡದ ದಾಳಿಯ ಆಯಾಮವನ್ನು ವಿಸ್ತರಿಸಿ, ಮುಂದಿನ ಪಂದ್ಯಗಳಲ್ಲಿಯೂ ಅವಳಿಂದ ಹೆಚ್ಚಿನ ನಿರೀಕ್ಷೆಗಳನ್ನು ಹುಟ್ಟಿಸಿದೆ.

— Ganesh S